4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ533/2019
ಪ್ರಾಸಾಃ 3, ಚಾಸಾಃ 4

ಸಾಕ್ಷಿಯ ಹೆಸರುಃ ಗೋವಿಂದರಾವ ಅಶೋಕ ಶೇಡಬಾಳ

ತಂದೆಯ ಹೆಸರುಃ ಅಶೋಕ ಶೇಡಬಾಳ

ವಯಸ್ಸುಃ 30 ವರ್ಷ

ಉದ್ಯೋಗಃ ಪ್ರಥಮ ದರ್ಜೆ ಸಹಾಯ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರ ಕಚೇರಿ, ಬೆಳಗಾವಿ.

ವಾಸ್ತವ್ಯಃ ಬೆಳಗಾವಿ.

ದಿನಾಂಕಃ **21.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು 06.03.2018 ರಿನಂ 31.01.2024 ರವರೆಗೆ ಜಿಲಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಯಲ್ಲಿ ದ್ವಿತಿಯ ದರ್ಜೆ ಸಹಾಯಕನೆಂದು ಕರ್ತವ್ಯ ನಿರ್ವಹಿಸಿದ್ದೇನೆ. ನಂತರ ನನಗೆ ಪದೋನ್ನತಿ ಹೊಂದಿ ನಾನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರ ಕಚೇರಿ, ಬೆಳಗಾವಿಯಲ್ಲಿ ಪ್ರಥಮ ದರ್ಜೆ ಸಹಾಯಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 07.07.2018 ರಂದು ನನ್ನ ಮೇಲಾಧಿಕಾರಿಯ ಆದೇಶದ ಮೇರೆಗೆ ಎಸಿಬಿರವರ ಕೋರಿಕೆಯ ಮೇರೆಗೆ ನಾನು ಬೆಳಿಗ್ಗೆ 11.45 ಗಂಟೆಗೆ ಎಸಿಬಿ ರವರ ಮುಂದೆ ಹಾಜರಾದೆನು. ಆಗ ಅಲ್ಲಿಗೆ ಚಾಸಾ 5 ಉಮೇಶ ಭಜಂತ್ರಿ ಸಹ ಬಂದಿದ್ದರು. ಈ ಕೇಸಿನ ಪಿರ್ಯಾದಿ ರವಿ ಶಿಂದೆ ಸಹ ಅಲ್ಲಿ ಇದ್ದು ಎಸಿಬಿಯವರು ನಮ್ಮನ್ನು ಒಬ್ಬರಿಗೊಬ್ಬರು ಪರಿಚಯ ಮಾಡಿ ಕೊಟ್ಟರು. ಎಸಿಬಿ

ಪೊಲೀಸ ಇನ್ಸಪೆಕ್ಟರವರು ಅವರ ಠಾಣಾ ಪ್ರಕರಣ ಸಂಖ್ಯೆ 9/2018 ಕಲಂ 7 ಪಿಸಿ ಕಾಯ್ದೆ 1988 ರಡಿಯಲ್ಲಿ ಆರೋಪಿತರಾದ ಬಿ.ಆರ್. ಜಾದವ ಮತ್ತು ಯೋಗೆಂದ್ರ ರಾಥೋಡ ಇವರ ಮೇಲೆ ಪ್ರಕರಣ ದಾಖಲಿಸಿಕೊಂಡ ಬಗ್ಗೆ ತಿಳಿಸಿದರು. ಪಿರ್ಯಾದಿದಾರರು ಕೊಟ್ಟ ದೂರಿನ ಪ್ರತಿಯನ್ನು ನಮ್ಮ ಸಮಕ್ಷಮ ಓದಿದರು. ಪ್ರವವ ಮತ್ತು ದೂರಿನ ಪ್ರತಿಯನ್ನು ನಮಗೆ ಕೊಟ್ಟು ಓದಲು ಹೇಳಿದ ಮೇರೆಗೆ ನಾವು ಓದಿದೆವು. ದೂರನ್ನು ಓದಿ ನೋಡಿದಾಗ ರಸೋಯಿ ದಿ ಪಂಜಾಬಿ ಕಿಚನ್ ಎಂಬ ಹೊಟೇಲನ್ನು ಪಿರ್ಯಾದಿದಾರ ಮತ್ತು ಆತನ ಪಾಲುದಾರ ದತ್ತಾತ್ರಯ ಜಾದವ ಸೇರಿ ನಡೆಸುವುದಾಗಿ ನಮೂದು ಇದ್ದು ಆ ಹೊಟೇಲಗೆ ದಿನಾಂಕ 19.06.2018 ರಂದು ಆರೋಪಿ ಬಿ. ಆರ್ ಜಾದವ ಇವರು ಹೊಟೇಲಗೆ ಬಂದು ಹಾಜರಿ ಪುಸ್ತಕ, ಲೈಸನ್ಸನ್ನು ತೋರಿಸಿಲ್ಲವೆಂದು ಹೇಳಿ ನೋಟಿಸ ನೀಡಿದರೆಂದು , ಪ್ರತಿ ತಿಂಗಳಿಗೆ ರೂ.1000/- ಯಂತೆ ಅಥವಾ ವರ್ಷಕ್ಕೆ ರೂ.10000/- ನೀಡುವಂತೆ ಬಿ.ಆರ್. ಜಾದವ ತಿಳಿಸಿದಾಗಿ ಆಗ ಅವರು ನಮ್ಮಲ್ಲಿ ಹಣವಿಲ್ಲವೆಂದು ಹೇಳಿದಾಗ ಆರೋಪಿ ಬಿ.ಆರ್. ಜಾದವ ವಿಜಿಟಿಂಗ್ ಕಾರ್ಡ ನೀಡಿ ಹೋದ ಬಗ್ಗೆ ದೂರಿನಲ್ಲಿ ನಮೂದು ಇತ್ತು. ಮುಂದುವರೆದು ದಿನಾಂಕ 06.07.2018 ರಂದು ಮಧ್ಯಾಹ್ಞ 01.45 ನಿಮಿಷಕ್ಕೆ ಆರೋಪಿ ರಾಠೋಡ ಅದೇ ಹೊಟೇಲಗೆ ಬಂದು ಆತನ ಸಾಹೇಬರಾದ ಜಾದವ ಕಳುಹಿಸಿದ್ದಾರೆಂದು ಹೇಳಿ ಜನವರಿಯಿಂದ ಇಲ್ಲಿಯವರೆಗೆ ಒಟ್ಟು ರೂ.6000/- ಮತ್ತು ಪ್ರತಿ ತಿಂಗಳ ರೂ.1000 ದಂತೆ ಅಥವಾ ವರ್ಷಕ್ಕೆ ರೂ.10000/- ನೀಡುವಂತೆ ತಿಳಿಸಿದರೆಂದು ದೂರಿನಲ್ಲಿ ನಮೂದು ಇತ್ತು. ಆಗ ಪಿರ್ಯಾದಿದಾರ ರವಿ ಶಿಂದೆ ಈತನು ಗಲ್ಲೆಯ ಮೇಲೆ ಕುಳಿತಾಗ

ಆರೋಪಿ ರಾಥೋಡನ್ನು ಟೇಬಲ ಸೋಫಾದ ಮೇಲೆ ಕುಳಿತುಕೊಳ್ಳಲು ಹೇಳಿ ಅವರಿಗೆ ಸ್ಯಾಕ್ಷ ಕೊಡಲು ಹೇಳಿ ಹೊಟೇಲ ಮ್ಯಾನೇಜರ ತೇಜಸ ಇವರನ್ನು ಕರೆಯಿಸಿ ಇವರು ಲೇಬರ ಡಿಪಾರ್ಟಮೆಂಟನವರು ಇದ್ದು ಹಣ ಕೇಳಲು ಬಂದಿದ್ದು ಅವರಲ್ಲಿ ಹಣವನ್ನು ಸ್ವಲ್ಪ ಕಡಿಮೆ ಮಾಡುವಂತೆ ಹೇಳಲು ಮತ್ತು ಅದನ್ನು ವಿಡಿಯೋ ರೆಕಾರ್ಡಿಂಗ್ ಮಾಡಲು ತಿಳಿಸಿದ ಬಗ್ಗೆ ದೂರಿನಲ್ಲಿ ನಮೂದು ಇತ್ತು. ಆಗ ಮ್ಯಾನೇಜರ ರವರು ರಾಥೋಡ ಇವರಿಗೆ ಹಣವನ್ನು ಕಡಿಮೆ ಮಾಡಲು ತಿಳಿಸಿದರೆಂದು ಆಗ ರಾಥೋಡ ಇವರು ವರ್ಷಕ್ಕೆ 9000 ಎಂದು ಮೊದಲು ಹೇಳಿ ನಂತರ ಜನವರಿಯಿಂದ ಇಲ್ಲಿಯವರೆಗೆ 4000/- ಕೊಡಿ, ವರ್ಷಕ್ಕೆ 8000/- ಕೊಡಿ ಎಂದು ರಾಥೋಡ ಹೇಳಿದರೆಂದು ದೂರಿನಲ್ಲಿ ನಮೂದನೆ ಇತ್ತು. ಮುಂದುವರೆದು ಪಿರ್ಯಾದಿದಾರರು 1 ನೇ ಆರೋಪಿ ಭೀಮಪ್ಪಾ ಜಾದವ ಇವರಿಗೆ ಫೋನ ಮಾಡಿ ನಿಮ್ಮ ಕಡೆಯವರು ಬಂದಿದ್ದಾರೆ ಹಣದಲ್ಲಿ ಕಡಿಮೆ ಮಾಡುವಂತೆ ಕೇಳಿಕೊಂಡಂತೆ ದೂರಿನಲ್ಲಿ ನಮೂದು ಇತ್ತು. ಆಗ ಬಿ.ಆರ್. ಜಾದವ ರೂ.3000/- ಗಳಿಗೆ ಒಪ್ಪಿದ್ದಾರೆಂದು ದೂರಿನಲ್ಲಿ ನಮೂದು ಇತ್ತು. ಆ ರೀತಿ ಹೇಳಿದ ಹಣವನ್ನು ಕೊಡಲು ಮನಸಿಲ್ಲವೆಂದು ಪಿರ್ಯಾದಿದಾರರು ಆರೋಪಿತರ ವಿರುದ್ಧ ದೂರು ದಾಖಲು ಮಾಡಿದ ಬಗ್ಗೆ ದೂರಿನಲ್ಲಿ ನಮೂದನೆ ಇತ್ತು. ದೂರಿನ ಪ್ರತಿಯನ್ನು ಓದಿದ ನಾನು ಮತ್ತು ಚಾಸಾ 5 ಉಮೇಶ ಭಜಂತ್ರಿ ಪಿರ್ಯಾದಿದಾರನನ್ನು ದೂರಿನ ಅಂಶಗಳನ್ನು ಕೇಳಿದಾಗ ಆತನು ಆ ದೂರಿನಲ್ಲಿ ಬರೆದಿದ್ದು ಸತ್ಯವಿದೆ ಎಂದು ಹೇಳಿದರು. ಎಸಿಬಿ ಕಚೇರಿಗೆ ನಾವು ಹೋದಾಗ ನಮಗೆ ಪರಿಚಯ ಮಾಡಿಕೊಟ್ಟ ನಂತರ ನನ್ನನ್ನು ಪಂಚ 1 ಎಂದು ಚಾಸಾ 5 ರವರನ್ನು ಪಂಚ 2

ಎಂದು ಪೊಲೀಸರು ನೇಮಿಸಿದ್ದರು. ಪಿರ್ಯಾದಿದಾರನು ದೂರಿನ ಅಂಶ ನಿಜವಿದೆ ಎಂದು ಹೇಳಿದ ನಂತರ ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿದಾರನಲ್ಲಿ ಆಪಾದಿತರಿಗೆ ಕೊಡಲು ಉದ್ದೇಶಿಸಿದ ಲಂಚದ ಹಣವನ್ನು ಹಾಜರು ಮಾಡುವಂತೆ ಪಿರ್ಯಾದಿದಾರನಿಗೆ ತಿಳಿಸಿದಾಗ ಪಿರ್ಯಾದಿದಾರರು ನಮ್ಮ ಸಮಕ್ಷಮ ರೂ.2000/- ಮೌಲ್ಯದ 1 ನೋಟು , ರೂ.500/- ಮೌಲ್ಯದ 2 ನೋಟುಗಳನ್ನು ಹೀಗೆ ಒಟ್ಟು ರೂ.3000/- ಹಣವನ್ನು ಹಾಜರು ಮಾಡಿದರು. ಆ ನೋಟುಗಳ ನಂಬರಗಳನ್ನು ಪಂಚ ಸಾಕ್ಷಿ 2 ರವರು ಹೇಳಿದ ರೀತಿಯಲ್ಲಿ ನಾನು ಒಂದು ಬಿಳಿ ಹಾಳೆಯಲ್ಲಿ ನೋಟುಗಳ ನಂಬರ ಮತ್ತು ಮೌಲ್ಯವನ್ನು ಬರೆದುಕೊಂಡೆನು. ಆ ಹಾಳೆಯ ಮೇಲೆ ನಾನು ಮತ್ತು ಪಂಚ 2 ರವರು ಸಹಿ ಹಾಕಿದ್ದು ಪೊಲೀಸ ಇನ್ಸಪೆಕ್ಟರವರು ಸಹಿ ಹಾಕಿದರು. ಆ ಹಾಳೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1(ಎ) ನನ್ನ ಸಹಿ. ಪೊಲೀಸ ಇನ್ಸಪೆಕ್ಟರವರು ಅವರ ಸಿಬ್ಬಂದಿ ಬಿ.ಜಿ. ಯಲಗಾರ ರವರಿಗೆ ಆ ನೋಟುಗಳಿಗೆ ಫಿನಾಪ್ತಲಿನ ಪೌಡರ ಸವರಲು ಹೇಳಿದ ಕಾರಣ ಅವರು ಫಿನಾಪ್ತಲಿನ ಪೌಡರನ್ನು ಸವರಿ ಆ ನೋಟುಗಳನ್ನು ಮೇಜಿನ ಮೇಲೆ ಇಟ್ಟರು. ಫಿನಾಪ್ತಲಿನ ಪೌಡರಿನ ಸ್ವಲ್ಪ ಭಾಗವನ್ನು ಸ್ಯಾಂಪಲ ತೆಗೆದು ಅದನ್ನು ಆರ್ಟಿಕಲ್ 1 ಎಂದು ನೀಡಲಾಯಿತು. ಪೊಲೀಸ ಸಿಬ್ಬಂದಿ ಶೇಖ ಎನ್ನುವವರು ಪೊಲೀಸ ಇನ್ಸಪೆಕ್ಟರವರು ಹೇಳಿದ ಮೇರೆಗೆ ಒಂದು ಬಟ್ಟಲಲ್ಲಿ ಡಿಸ್ಟಿಲ್ ವಾಟರ ಹಾಕಿದರು. ಆ ಡಿಸ್ಟಿಲ್ ವಾಟರ ಸ್ವಲ್ಪ ಭಾಗ ಬಾಟಲಲ್ಲಿ ಸಂಗ್ರಹಿಸಿ ಅದಕ್ಕೆ ಆರ್ಟಿಕಲ್ 2 ಎಂದು ನೀಡಲಾಯಿತು. ಸೋಡಿಯಂ ಕಾರ್ಬೋನೇಟ ಪೌಡರನ್ನು ಡಿಸ್ಟಿಲ್ ವಾಟರಗೆ

ಬೆರಸಲಾಯಿತು. ಆ ಬೆರಸಿದ ಸೋಡಿಯಂ ಕಾರ್ಬೋನೇಟಿನ ಸ್ವಲ್ಪ ಭಾಗವನ್ನು ಸ್ಯಾಂಪಲ ತೆಗೆದು ಆರ್ಟಿಕಲ್ 3 ಎಂದು ನೀಡಲಾಯಿತು.ಸೋಡಿಯಂ ಕಾರ್ಬೋನೇಟ ಡಿಸ್ಟಿಲ್ ವಾಟರ ಮಿಶ್ರಿತ ದ್ರಾವಣವನ್ನು ಸ್ಯಾಂಪಲ ತೆಗೆದು ಅದಕ್ಕೆ ಆರ್ಟಿಕಲ್ 4 ಎಂದು ನೀಡಲಾಯಿತು. ಪೊಲೀಸ ಇನ್ಸಪೆಕ್ಟರವರು ಪಂಚ 2 ರವರಿಗೆ ಪಿರ್ಯಾದಿದಾರರ ಅಂಗಶೋಧನೆ ಮಾಡುವಂತೆ ಹೇಳಿದರ ಕಾರಣ ಪಂಚ 2 ರವರು ಪಿರ್ಯಾದಿದಾರನ ಅಂಗ ಶೋಧನೆ ಮಾಡಿದರು. ಪಿರ್ಯಾದಿದಾರರು ಟೀ ಶರ್ಟ ಮತ್ತು ಜೆನ್ಸ ಪ್ಯಾಂಟ ಧರಿಸಿದ್ದರು. ಅವರ ಕೈಯಲ್ಲಿ ಪ್ರವವ ಮತ್ತು ದೂರಿನ ಪ್ರತಿ ಇತ್ತು. ಟೀ ಶರ್ಟಗೆ ಜೇಬು ಇರಲಿಲ್ಲ. ಪಿರ್ಯಾದಿದಾರನ ಜೆನ್ಸ ಪ್ಯಾಂಟಿನ ಮುಂದಿನ ಬಲಗಡೆ ಜೇಬಿನಲ್ಲಿ ಚಾವಿ ಮತ್ತು ಕಾರ್ಡ ಹೋಲ್ಡರ ಇತ್ತು, ಅದರಲ್ಲಿ ವಿವಿಧ ಬ್ಯಾಂಕಗಳ ಎಟಿಎಂ ಕಾರ್ಡಗಳು ಮತ್ತು ಡಿಎಲ್ ಇತ್ತು. ಪ್ಯಾಂಟಿನ ಮುಂದಿನ ಎಡಗಡೆ ಜೇಬಿನಲ್ಲಿ ರೂ.2000/- ಮೌಲ್ಯದ 2 ನೋಟುಗಳು, ರೂ.500/- ಮೌಲ್ಯದ 2 ನೋಟುಗಳು, ಪ್ಯಾಂಟಿನ ಹಿಂದಿನ ಎಡ ಜೇಬಿನಲ್ಲಿ ಕರ ವಸ್ತ್ರ ಇತ್ತು. ಪ್ಯಾಂಟಿನ ಹಿಂದಿನ ಬಲ ಜೇಬು ಖಾಲಿ ಇತ್ತು. ಈ ರೀತಿ ಅಂಗ ಶೋಧನೆ ಆದ ನಂತರ ಪಂಚ 2 ರವರಿಗೆ ಪೊಲೀಸ ಇನ್ಸಪೆಕ್ಟರವರು ಅವರ ಎರಡು ಕೈಬೆರಳುಗಳನ್ನು ಅಲ್ಲಿದ್ದ ದ್ರಾವಣದಲ್ಲಿ ಅದ್ದಿ ತೊಳೆಯಲು ಹೇಳಿದ ಮೇರೆ ಪಂಚ 2 ರವರು ಅವರ ಕೈಯ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿ ತೊಳೆದರು. ಆಗ ದ್ರಾವಣದ ಬಣ್ಣ ಬದಲಾಗಲಿಲ್ಲ . ನಂತರ ಪಂಚ 2 ರವರಿಗೆ ಪೊಲೀಸ ಇನ್ಸಪೆಕ್ಟರವರು ಅಲ್ಲಿ ಟೇಬಲ ಮೇಲೆ ಇಟ್ಟಿದ್ದ ಫಿನಾಪ್ತಲಿನ ಪೌಡರ ಸವರಿದ ಹಣವನ್ನು ಎರಡು ಕೈಗಳಿಂದ ಏಣಿಸಿ ಆ ಹಣವನ್ನು ಪಿರ್ಯಾದಿದಾರನ ಪ್ಯಾಂಟಿನ

ಹಿಂದಿನ ಬಲ ಜೇಬಿನಲ್ಲಿ ಇಡಲು ಹೇಳಿದ ಕಾರಣ ಪಂಚ 2 ರವರು ಆ ಹಣವನ್ನು ಎರಡು ಕೈಗಳಿಂದ ಏಣಿಸಿ ಪಿರ್ಯಾದಿದಾರನು ಪ್ಯಾಂಟಿನ ಹಿಂದಿನ ಬಲ ಜೇಬಿನಲ್ಲಿ ಇಟ್ಟರು. ನಂತರ ಪಂಚ 2 ರವರು ಅವರ ಎರಡು ಕೈಗಳ ಬೆರಳುಗಳನ್ನು ಅಲ್ಲಿದ್ದ ಸೋಡಿಯಂ ಕಾರ್ಬೋನೇಟ ಡಿಸ್ಟೀಲ್ ವಾಟರ ಮಿಶ್ರಿತ ಧ್ರಾವಣದಲ್ಲಿ ತೊಳೆದಾಗ ಆ ಧ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ಧ್ರಾವಣವನ್ನು ಒಂದು ಬಾಟಲಲ್ಲಿ ಸಂಗ್ರಹಿಸಿ ಅದಕ್ಕೆ ಆರ್ಟಿಕಲ್ 5 ಎಂದು ನೀಡಲಾಯಿತು. ಪೊಲೀಸ ಇನ್ಸಪೆಕ್ಟರವರು ನಮಗೆ ಫಿನಾಪ್ತಲಿನ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ ಧ್ರಾವಣದ ಮಿಶ್ರಣದಿಂದ ಉಂಟಾಗುವ ರಾಸಾಯನಿಕ ಬದಲಾವಣೆ ಬಗ್ಗೆ ತಿಳಿಸಿದರು.

ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿದಾರರಿಗೆ ಮೊಬೈಲ ಫೋನನಲ್ಲಿದ್ದ ಆಡಿಯೋ ವಿಡಿಯೋ ರೆಕಾರ್ಡನ್ನು ಪ್ಲೇ ಮಾಡಿ ತೋರಿಸಿ ಕೇಳಿಸಲು ಹೇಳಿದರು. ಆಗ ಪಿರ್ಯಾದಿದಾರನ್ನು ಅವರ ಮೊಬೈಲ ಫೋನನಲ್ಲಿದ್ದ ಆಡಿಯೋ ವಿಡಿಯೋ ರೆಕಾರ್ಡನ್ನು ಪಂಚರಾದ ನಮಗೆ ಪ್ಲೇ ಮಾಡಿ ತೋರಿಸಿ ಕೇಳಿಸಿದರು. ಅದರಲ್ಲಿ ಎರಡು ಫೋಲ್ಡರ ಇದ್ದು ಒಂದರಲ್ಲಿ ವಿಡಿಯೋ ಮತ್ತು ಆಡಿಯೋ ಎರಡು ಇತ್ತು. ಇನ್ನೊಂದು ಫೋಲ್ಡರನಲ್ಲಿ ಧ್ವನಿ ಮುದ್ರಣ ಮಾತ್ರ ಇತ್ತು. ವಿಡಿಯೋ ಆಡಿಯೋದಲ್ಲಿ ಹೊಟೇಲ ಮ್ಯಾನೇಜರ ಮತ್ತು 2 ನೇ ಆರೋಪಿಯ ನಡುವೆಯಾದ ಸಂಭಾಪಣೆಯ ವಿಡಿಯೋ ಆಡಿಯೋ ರೆಕಾರ್ಡಿಂಗ ಇತ್ತು. ಧ್ವನಿ ಮುದ್ರಣದಲ್ಲಿ ಪಿರ್ಯಾದಿ ಮತ್ತು 1 ನೇ ಆರೋಪಿಯ ನಡುವೆಯಾದ ಸಂಭಾಷಣೆ ಇತ್ತು. ಈ ರೀತಿ ಇದ್ದ ವಿಡಿಯೋ ಆಡಿಯೋ ರೆಕಾರ್ಡಿಂಗ್ ಮತ್ತು ಆಡಿಯೋ ರೆಕಾರ್ಡಿಂಗ್ ನಲ್ಲಿ ಆರೋಪಿತರು

ಲಂಚದ ಬೇಡಿಕೆ ಇಟ್ಟ ಬಗ್ಗೆ ಇತ್ತು. ಈ ರೀತಿ ಪಂಚರಾದ ನಮಗೆ ವಿಡಿಯೋ ಆಡಿಯೋ ರೆಕಾರ್ಡಿಂಗನ್ನು ಧ್ವನಿ ಮುದ್ರಣವನ್ನು ಕೇಳಿಸಿದನಂತರ ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿಯ ಮೊಬೈಲ ಫೋನನಲ್ಲಿ ಇದ್ದ ರೆಕಾರ್ಡಿಂಗನ್ನು ಅವರ ಲ್ಯಾಪಟಾಪ ಸಹಾಯದಿಂದ ಡೌನಲೋಡ ಮಾಡಿಕೊಂಡು ಅವುಗಳನ್ನು ಎರಡು ಡಿವಿಡಿಗಳಲ್ಲಿ ಕಾಪಿ ಮಾಡಿ ಆ ಡಿವಿಡಿಗಳಿಗೆ ಆರ್ಟಿಕಲ್ 6 , 6(ಎ) ಎಂದು ಕೊಟ್ಟರು. ಮೊಬೈಲ ಫೋನನನ್ನು ಮರಳಿ ಪಿರ್ಯಾದಿಗೆ ನೀಡಿದರು. ಪೊಲೀಸ ಇನ್ಸಪೆಕ್ಟರವರು ಪಂಚರಾದ ನಮ್ಮ ಸಮಕ್ಷಮ ಆರ್ಟಿಕಲ್ 1 ರಿಂದ 6(ಎ) ವನ್ನು ಹಂತ ಹಂತವಾಗಿ ಸೀಲ ಮಾಡಿ ನನ್ನ ಮತ್ತು ಪಂಚ 2 ರವರ ಸಹಿ ಪಡೆದು ಅದಕ್ಕೆ ಅಂಟಿಸಿ ಪೊಲೀಸ ಇನ್ಸಪೆಕ್ಟರವರು ಸಹ ಸಹಿ ಹಾಕಿ ಆ ಆರ್ಟಿಕಲ್‌ಗಳಿಗೆ S ಎಂಬ ಇಂಗ್ಲೀಷ ಅಕ್ಷರದ ಮೊಹರಿನ ಸೀಲ ಹಾಕಿದರು. ಆರ್ಟಿಕಲ್ 1 ರಿಂದ 6ನ್ನು ನಾನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು ಮಾ 1 ರಿಂದ 6 ಎಂದು ಗುರುತಿಸಲಾಯಿತು. ನಂತರ ಪೊಲೀಸ ಇನ್ಸಪೆಕ್ಟರವರು ಸರ್ಕಾರಿ ಸೋನಿ ವಾಯ್ಸು ರೆಕಾರ್ಡರನ್ನು ಪಿರ್ಯಾದಿಗೆ ನೀಡಿ ಆತ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ಅದರಲ್ಲಿ ರೆಕಾರ್ಡ ಮಾಡುವಂತೆ ತಿಳಿಸಿದರು. ಪಂಚ 1 ಆದ ನನಗೆ ಪಿರ್ಯದಿದಾರನಿಗೆ ಅನುಸರಿಸಿ ಹೋಗುವಂತೆ ಅಲ್ಲಿ ನಡೆಯುವ ಘಟನೆಗಳನ್ನು ಗಮನಿಸಿ ಹೇಳುವಂತೆ ತಿಳಿಸಿದರು. ಪಂಚ 2 ರವರಿಗೆ ಪೊಲೀಸ ಇನ್ಸಪೆಕ್ಟರ ಮತ್ತು ಅವರ ಸಿಬ್ಬಂದಿಯವರ ಜೊತೆ ಇರುವಂತೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು ಪಿರ್ ಯಾದಿದಾರನಲ್ಲಿ ಆರೋಪಿತರ ಬಳಿ ಮೊದಲು ಕೆಲಸದ ಬಗ್ಗೆ ಕೇಳಿಬೇಕು ಲಂಚದ ಹಣಕ್ಕೆ ಬೇಡಿಕೆ ಇಟ್ಟರೆ ಮಾತ್ರ ಫಿನಾಪ್ತಲಿನ ಪೌಡರ ಸವರಿದ ಹಣವನ್ನು

ನೀಡಿ ನಂತರ ಆತನ ಪ್ಯಾಂಟಿನ ಜೇಬಿನಲ್ಲಿದ್ದ ಕರವಸ್ತವನ್ನು ತೆಗೆದು ಮುಖ ಒರೆಸಿಕೊಳ್ಳುವ ಮೂಲಕ ಸನ್ನೇ ನೀಡುವಂತೆ ತಿಳಿಸಿದರು. ಪಂಚನಾಮೆಯನ್ನು ಯಾವ ರೀತಿ ಮಾಡಲಾಗುತ್ತದೆ ಎಂದು ಪೊಲೀಸ ಇನ್ಸಪೆಕ್ಟರವರು ಪಂಚರಾದ ನಮಗೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು ಅವರ ಸಿಬ್ಬಂದಿ ಮಾವರಕರ ಮೂಲಕ ಫೊಟೋಗಳನ್ನು ತೆಗೆಸಿದರು. ಆ ಫೊಟೋಗಳನ್ನು ನಾನು ಗುರುತಿಸಿದ್ದು ಒಟ್ಟು 20 ಫೊಟೋಗಳು ಇದ್ದು ಅವುಗಳನ್ನು ನಿಪಿ-2 ಎಂದು ಗುರುತಿಸಲಾಯಿತು. ನಾವು ಪೊಲೀಸ ಇನ್ಸಪೆಕ್ಟರವರು ಹೇಳಿದ ಮೇರೆಗೆ ನಮ್ಮ ಕೈಗಳನ್ನು ಸೋಪಗಳಿಂದ ತೊಳೆದುಕೊಂಡೆವು. ಪಂಚನಾಮೆಯನ್ನು ಪಂಚರಾದ ನಮ್ಮ ಉಕ್ತ ಲೇಖನದ ಮೇರೆಗೆ ಎಸಿಬಿ ಸಿಬ್ಬಂದಿ ಬಿ.ಸಿ. ಗೌಡರ ಇವರು ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿದ್ದು ಪಂಚನಾಮೆಯನ್ನು ದಿನಾಂಕ 07.07.2018 ರಂದು ಬೆಳಿಗ್ಗೆ 11.45 ಗಂಟೆಯಿಂದ ಮಧ್ಯಾಹ್ನ 01.00 ಗಂಟೆ ವರೆಗೆ ಮಾಡಲಾಗಿತ್ತು. ಪಂಚನಾಮೆಗೆ ನಾವು ಸಹಿ ಹಾಕಿದ್ದೇವು. ಪಂಚನಾಮೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಪ್ರತಿ ಪುಟಗಳಲ್ಲೂ ನನ್ನ ಸಹಿ ಇದ್ದು ಅವುಗಳನ್ನು ಗುರುತಿಸಿದ್ದೇನೆ. ಕೊನೆಯ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸ ಇನ್ಸಪೆಕ್ಟರವರು ಬೆಳಿಗ್ಗೆ 11.45 ಗಂಟೆಯಿಂದ ಮಧ್ಯಾಹ್ನ 01.00 ಗಂಟೆ ವರೆಗೆ ಮಾಡಿದ ಪಂಚನಾಮೆ ಬಗ್ಗೆ ಮತ್ತೊಮ್ಮೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿದಾರರಿಗೆ ಈಗ ಎಲ್ಲಿ ಹೋಗುವುದಾಗಿ ಕೇಳಿದಾಗ ಪಿರ್ಯಾದಿದಾರರು ಆರೋಪಿತರು ಅವರ ಹೊಟೇಲಗೆ ಬರುವ ವೇಳೆ ಆಗಿದ್ದು ಈಗ ಹೊಟೇಲಗೆ ಹೋಗುವುದಾಗಿ

ಹೇಳಿದರು. ಪೊಲೀಸ ಇನ್ಸಪೆಕ್ಟರವರು ನನಗೆ ಮತ್ತು ಪಿರ್ಯಾದಿದಾರರಿಗೆ ಮೋಟರ ಸೈಕಲ ಎಕ್ಸೆಸ್ ವಾಹನದಲ್ಲಿ ಪಿರ್ಯಾದಿದಾರನ ಹೊಟೇಲಗೆ ಹೋಗುವಂತೆ ತಿಳಿಸಿದನು. ಅದರಂತೆ ನಾವು ಮೋಟರ ಸೈಕಲನಲ್ಲಿ ಪಿರ್ಯಾದಾರನ ಹೊಟೇಲನ ಹತ್ತಿರ ಹೋದೆವು. ಪೊಲೀಸ ಇನ್ಸಪೆಕ್ಟರ ಪಂಚ 2 ಅವರ ಸಿಬ್ಬಂದಿ ಎಲ್ಲರೂ ಸರ್ಕಾರಿ ವಾಹನದಲ್ಲಿ ಬಂದರು. ನಾವು ಮಧ್ಯಾಹ್ನ 01.45 ಗಂಟೆಗೆ ಎಸಿಬಿ ಕಚೇರಿಯಿಂದ ಹೊರಟು ಪಿರ್ಯಾದಿಯ ಹೊಟೇಲಗೆ ಮಧ್ಯಾಹ್ನ 02.00 ಗಂಟೆಗೆ ಹೋದೆವು. ಪಿರ್ಯಾದಿದಾರನು ಆತನ ಹೊಟೇಲನ ಗಲ್ಲೆಯಲ್ಲಿ ಕುಳಿತುಕೊಂಡೆನು. ಆಗ ನಾನು ಗಲ್ಲೆಯ ಪಶ್ಚಿಮ ದಿಕ್ಕಿಗೆ ಇರುವ ಟೇಬಲನ ಸೋಫಾದ ಮೇಲೆ ಕುಳಿತುಕೊಂಡೆನು. ಪೊಲೀಸ ಇನ್ಸಪೆಕ್ಟರ , ಪಂಚ 2 ಮತ್ತು ಅವರ ಸಿಬ್ಬಂದಿ ಆಯಾ ಕಟ್ಟಿನ ಸ್ಥಳದಲ್ಲಿ ನಿಂತರು. ಮಧ್ಯಾಹ್ನ 02.15 ಗಂಟೆ ಸಮಯವಾದರೂ ಆಪಾದಿತರು ಹೊಟೇಲಗೆ ಬರದೇ ಇದ್ದಾಗ ನಾನು ಮತ್ತು ಪಿರ್ಯಾದಿದರರು ಹೋಟೇಲನಿಂದ ಹೊರಗೆ ಬಂದು ಪೊಲೀಸ ಇನ್ಸಪೆಕ್ಟರವರು ಭೇಟಿ ಯಾಗಿ ಇಲ್ಲಿಯವರೆಗೆ ಆರೋಪಿತರು ಬಂದಿಲ್ಲವೆಂದು ಹೇಳಿದೇವು. ಆಗ ಪಿರ್ಯಾದಿದಾರರು ತಾನು ಆರೋಪಿಗೆ ಫೋನ ಮಾಡುವುದಾಗಿ ಹೇಳಿ, 1 ನೇ ಆರೋಪಿಗೆ ಪಿರ್ಯದಿಯೂ ಆತನ ಮೊಬೈಲ ಫೋನನಿಂದ ಫೋನ ಮಾಡಿದನು. ಆಗ not reachable ಎಂದು ಬಂದಿರುತ್ತದೆ ಎಂದ ಪಿರ್ಯಾದಿದಾರನು ತಿಳಿಸಿದನು. ಆಗ ಪಿರ್ಯಾದಿದರನು ಆ ತನ ಹೊಟೇಲ ಮ್ಯಾನೇಜರ ಚಾಸಾ 2 ತೇಜಸ ಈತನನ್ನು ಕರೆದು 2 ನೇ ಆರೋಪಿಗೆ ಫೋನ ಮಾಡಲು ತಿಳಿಸಿದನು. ಆಗ ಚಾಸಾ 2 ತೇಜಸ ಈತನು ಆತನ ಮೊಬೈಲ

ಫೋನನಿಂದ 2 ನೇ ಆರೋಪಿಗೆ ಫೋನ ಮಾಡಿದಾಗ 2 ನೇ ಆರೋಪಿಯು ಚಾಸಾ-2 ರವರು ಮಾಡಿದ ಫೋನನ್ನು ರೀಸಿವ ಮಾಡಿದನು. ಆಗ ಚಾಸಾ 2 ತೇಸಜ 2 ನೇ ಆರೋಪಿಯಲ್ಲಿ ಸಾಹೇಬರು ಎಲ್ಲಿದ್ದಾರೆಂದು ಕೇಳಿದನು. ಆಗ 2 ನೇ ಆರೋಪಿಯು ಸಾಹೇಬರು ಡಿಸಿ ಮಿಟಿಂಗ್ನಲ್ಲಿ ಇದ್ದಾರೆಂದು ತಿಳಿಸಿದರು. 15 ನಿಮಿಷದಲ್ಲಿ ನಾನು ಅಲ್ಲಿ ಹೊಟೇಲಗೆ ಬರುತ್ತೇನೆ. ಸಾಹೇಬರು ಹಣವನ್ನು ಪಡೆದುಕೊಳ್ಳಲು ಹೇಳಿದ್ದಾರೆ ಆ ಕಾರಣ ಹೊಟೇಲಗೆ ಬರುವುದಾಗಿ 2 ನೇ ಆರೋಪಿ ಚಾಸಾ 2 ತೇಸಜಗೆ ಫೋನನಲ್ಲಿ ಹೇಳಿದನು. ನಂತರ ನಾನು, ಪಿರ್ಯಾದಿ ಮತ್ತು ಚಾಸಾ 2 ತೇಸಜ ಹೊಟೇಲ ಒಳಗೆ ಹೊದೆವು. ಪೊಲೀಸ ಇನ್ಸಪೆಕ್ಟರ ಪಂಚ 2 ಮತ್ತು ಎಸಿಬಿ ಸಿಬ್ಬಂದಿ ಆಯಾ ಕಟ್ಟಿನ ಸ್ಥಳದಲ್ಲಿ ಕಾಯುತ್ತಾ ನಿಂತರು. ಮಧ್ಯಾಹ್ನ 02.40 ಗಂಟೆಗೆ 2 ಆರೋಪಿಯು ಪಿರ್ಯಾದಿದಾರನ ಹೊಟೇಲಗೆ ಬಂದು ಪಿರ್ಯಾದಿ ರವಿ ಶಿಂದೆ ಇವರಲ್ಲಿ ಸಾಹೇಬರು ನನ್ನನ್ನು ಕಳುಹಿಸಿದ್ದಾರೆ ಹಣವನ್ನು ಕೊಡುವಂತೆ ಕೇಳಿದರು. ಆಗ ಪಿರ್ಯಾದಿದಾರರು 2 ನೇ ಆರೋಪಿಯನ್ನು ಟೇಬಲ ಸೋಫಾದ ಮೇಲೆ ಕುಳಿತುಕೊಳ್ಳಲು ಹೇಳಿ ಒಳಗಡೆ ಹೋದರು. ಪಿರ್ಯಾದಿದಾರನು ಆತನ ಬಳಿ ಇದ್ದ ಸರ್ಕಾರಿ ಸೋನಿ ವಾಯ್ಸ ರಿಕಾರ್ಡರನ್ನು ಆನ್ ಮಾಡಿಕೊಂಡು ಬಂದು ಚಾಸಾ-2 ತೇಜಸ ಇವರನ್ನು ಕರೆದು 2 ನೇ ಆರೋಪಿ ಕುಳಿತ ಟೇಬಲನ ಸೋಫಾದಲ್ಲಿ ಕುಳಿತಕೊಂಡರು. ಪಿರ್ಯಾದಿದಾರನು 2 ನೇ ಆರೋಪಿಯಲ್ಲಿ ನಿಮ್ಮ ಸಾಹೇಬರು ರೂ.3000/- ಕೊಡಬೇಕೆಂದು ಹೇಳಿದ್ದಾರೆಂದು ಹೇಳಿದರು. ಆಗ 2 ನೇ ಆರೋಪಿಯು ಇಲ್ಲ ರೂ.4000/- ಕೊಡಿ ಎಂದು ತಿಳಿಸಿದನು. ಆಗ ಪಿರ್ಯಾದಿ ಇಲ್ಲ ನಿನ್ನೆ ನಿಮ್ಮ ಸಾಹೇಬರಿಗೆ ಫೋನ

ಮಾಡಿದಾಗ ರೂ.3000/-ಗಳಿಗೆ ಒಪ್ಪಿ ಕೊಂಡಿದ್ದು ಇದನ್ನು ತೆಗೆದುಕೊಳ್ಳಿ ಎಂದು ಹೇಳಿ ಪಿರ್ಯಾದಿದಾರನು ಆತನಲ್ಲಿ ಇದ್ದ ರೂ.3000/- ಹಣ ವನ್ನು 2 ನೇ ಆರೋಪಿಗೆ ಕೊಟ್ಟರು. ಆಗ 2 ನೇ ಆರೋಪಿಯು ಆ ರೂ.3000/- ಹಣವನ್ನು ಪಿರ್ಯಾದಿಯಿಂದ ಸ್ವೀಕರಿಸಿ ಆತನ ಎರಡು ಕೈಗಳಿಂದ ಆ ಹಣವನ್ನು ಏಣಿಸಿ ಆತನ ಬಳಿ ಇದ್ದ ಕರಿ ಬಣ್ಣದ ಹ್ಯಾಂಡ ಬ್ಯಾಗನ ಜೇಪ್‌ನ್ನು ತೆರೆದು ಆ ಬ್ಯಾಗನಲ್ಲಿ ಇಟ್ಟುಕೊಂಡರು. ನಂತರ 2 ನೇ ಆರೋಪಿಯು 1 ನೇ ಆರೋಪಿಗೆ ಫೋನ ಮಾಡಿ ರೂ.3000/- ನೀಡಿದ ಬಗ್ಗೆ ತಿಳಿಸಿದರು. ನಂತರ ಪಿರ್ಯಾದಿದಾರನು ಹೊಟೇಲನ ಬಾಗಿಲ ಹತ್ತಿರ ಬಂದು ಎಲ್ಲರಿಗೂ ಅಂದರೆ ಪೊಲೀಸ ಇನ್ಸಪೆಕ್ಟರ, ಪಂಚ 2 ಮತ್ತು ಎಸಿಬಿ ಸಿಬ್ಬಂದಿಯವರಿಗೆ ಕಾಣುವಂತೆ ಅವರ ಪ್ಯಾಂಟಿನ ಜೇಬಿನಿಂದ ಕರ ವಸ್ತ್ರವನ್ನು ತೆಗೆದು ಮುಖ್ಯ ಒರೆಸಿಕೊಳ್ಳುವ ಮೂಲಕ ಸನ್ನೆಯನ್ನು ನೀಡಿದರು. ಆಗ ಪೊಲೀಸ ಇನ್ಸಪೆಕ್ಟರ, ಅವರ ಸಿಬ್ಬಂದಿ ಮತ್ತು ಪಂಚ 2 ರವರು ಅಲ್ಲಿಗೆ ಬಂದರು. ಆಗ ಪಿರ್ಯಾದಿದಾರರು 2 ನೇ ಆರೋಪಿಯನ್ನು ತೋರಿಸಿ ಇವರು ರಾಠೋಡ ಇದ್ದು ಅವರ ಸಾಹೇಬರಾದ ಬಿ.ಆರ್.ಜಾದವ ಇವರು ಹೇಳಿದಂತೆ ರೂ.3000/- ಹಣವನ್ನು ಸ್ವೀಕರಿಸಿ ಕರಿ ಬಣ್ಣದ ಹ್ಯಾಂಡ ಬ್ಯಾಗನಲ್ಲಿ ಇಟ್ಟುಕೊಂಡ ಬಗ್ಗೆ ತಿಳಿಸಿದರು. ಆಗ ಪೊಲೀಸ ಇನ್ಸಪೆಕ್ಟರವರು ಅವರ ಬಳಿ ಇದ್ದ ಗುರುತಿನ ಚೀಟಿಯನ್ನು 2 ನೇ ಆರೋಪಿಗೆ ತೋರಿಸಿದರು. ಪಂಚ ಸಾಕ್ಷಿಗಳಾದ ನನ್ನ ಮತ್ತು ಚಾಸಾ 5 ರವರ ಪರಿಚಯ ಮಾಡಿಕೊಟ್ಟರು. 2 ನೇ ಆರೊಪಿಗೆ ಆತನ ವಿರುದ್ಧ ಎಸಿಬಿ ಪೊಲೀಸ ಠಾಣೆಯಲ್ಲಿ ಪ್ರಕರಣ ಸಂಖ್ಯೆ 9/2019 ಪ್ರಕರಣ ದಾಖಲಾದ ಬಗ್ಗೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು 2 ನೇ ಆರೋಪಿಗೆ ತನಿಖೆಗೆ ಸಹಕರಿಸುವಂತೆ ಹೇಳಿದಾಗ

ಆತನು ತನಿಖೆಗೆ ಸಹಕರಿಸುವಂತೆ ತಿಳಿಸಿದನು. 2 ನೇ ಆರೋಪಿಯು ತನ್ನ ಹೆಸರು ಯೋಗೆಂದ್ರ ಪಿತ್ತಪ್ಪಾ ರಾಠೋಡ ಎಂದು ಹೇಳಿ ಆತನ ಹುದ್ದೆ ಮತ್ತು ವಿಳಾಸ ಹೇಳಿ ತನಿಖೆಗೆ ಸಹಕಾರ ಮಾಡುವುದಾಗಿ ತಿಳಿಸಿದರು. ಆಗ ಪೊಲೀಸ ಇನ್ಸಪೆಕ್ಟರವರು ಅವರ ಸಿಬ್ಬಂದಿ ಬಿ ಸಿ ಗೌಡರ ಮುಖಾಂತರ ಎರಡು ಸ್ವಚ್ಛವಾದ ಪಿಂಗಾಣಿ ಬಟ್ಟಲಲ್ಲಿ ಸೋಡಿಯಂ ಕಾರ್ಬೋನೇಟ ಡಿಸ್ಟೀಲ್ ವಾಟರ ಮಿಶ್ರಿತ ದ್ರಾವಣ ತಯಾರಿಸಿದರು. ಅದರಲ್ಲಿನ ಸ್ವಲ್ಪ ಭಾಗ ಸ್ಯಾಂಪಲನ್ನು ಎರಡು ಬಾಟಲಗಳಲ್ಲಿ ಸಂಗ್ರಹಿಸಿದ ಅವುಗಳಿಗೆ ಆರ್ಟಿಕಲಿ 7, 7 ಎ ಎಂದು ನೀಡಲಾಯಿತು. 2 ನೇ ಆರೋಪಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಬಟ್ಟಲಲ್ಲಿ ಇದ್ದ ದ್ರಾವಣದಲ್ಲಿ ಪ್ರತ್ಯೇಕವಾಗಿ ಅದ್ದಿ ತೊಳೆಯಲು ಹೇಳಿದ ಮೇರಗೆ 2 ನೇ ಆರೋಪಿಯು ಮೊದಲು ಆತನ ಬಲಗೈಯ ಬೆರಳುಗಳನ್ನು ಒಂದು ಬಟ್ಟಲನಲ್ಲಿದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಆ ದ್ರಾವಣ ಎರಡು ಬಾಟಲಗಳಲ್ಲಿ ಸಂಗ್ರಹಿಸಿ ಅವುಗಳಿಗೆ ಆರ್ಟಿಕಲ್ 8, 8 ಎ ಎಂದು ನೀಡಲಾಯಿತು. ನಂತರ 2 ನೇ ಆರೋಪಿಯು ಆತನ ಎಡಗೈಯ ಬೆರಳುಗಳನ್ನು ಇನ್ನೊಂದು ಬಟ್ಟಲನಲ್ಲಿದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಆ ದ್ರಾವಣ ಎರಡು ಬಾಟಲಗಳಲ್ಲಿ ಸಂಗ್ರಹಿಸಿ ಅವುಗಳಿಗೆ ಆರ್ಟಿಕಲ್ 9, 9 ಎ ಎಂದು ನೀಡಲಾಯಿತು.

ಈ ಹಂತದಲ್ಲಿ ಊಟದ ವಿರಾಮವಾಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನು ಮಧ್ಯಾಹ್ನ ಮುಂದುಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ**.**

ದಿನಾಂಕಃ **21.03.2024** ರಂದು ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ವೇಳೆ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ನಾಳೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ**.**

ದಿನಾಂಕಃ **22.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಪೊಲೀಸ ಇನ್ಸಪೆಕ್ಟರವರಿಗೆ 2 ನೇ ಆರೋಪಿಗೆ ಹಣ ಎಲ್ಲಿದೆ ಎಂದು ಕೇಳಿದರು. ಆಗ 2 ನೇ ಆರೋಪಿ ಆತನ ಬಳಿ ಇದ್ದ ಕರಿ ಬಣ್ಣದ ಬ್ಯಾಗಿನ ಜಿಪ್ ತೆಗೆದು ಹಣವನ್ನು ತೋರಿಸಿದನು. ಆಗ ಪೊಲೀಸ ಇನ್ಸಪೆಕ್ಟರವರು 2 ನೇ ಆರೋಪಿಗೆ ಆ ಹಣವನ್ನು ಪಂಚ ಸಾಕ್ಷಿದಾರರಾದ ನಮ್ಮ ಬಳಿ ನಿಡಲು ಹೇಳಿದ ಕಾರಣ 2 ನೇ ಆರೋಪಿ ನನ್ನ ಬಳಿ ಆ ಹಣವನ್ನು ನೀಡಿದನು. ಆಗ ಪಂಚರಾದ ನಾವು ಹಣವನ್ನು ಪರಿಶೀಲಿಸಿ ಪಂಚನಾಮೆ ಕಾಲಕ್ಕೆ ಬರೆದ ಹಾಳೆಯಲ್ಲಿರುವ ನೋಟುಗಳ ನಂಬರಗಳನ್ನು ತಾಳೆ ಮಾಡಿ ನೋಡಿದಾಗ ತಾಳೆ ಆಗಿತ್ತು. 2 ನೇ ಆರೋಪಿಯು ಅದೇ ನೋಟುಗಳಾದ 2000 ಮುಖ ಬೆಲೆಯ 1 ನೋಟು ಮತ್ತು 500 ಮುಖ ಬೆಲೆಯ 2 ನೋಟುಗಳನ್ನು ಹಾಜರು ಪಡಿಸಿದ್ದನು. 2 ನೇ ಆರೋಪಿ ಹಾಜರು ಮಾಡಿದ ಆ ನೋಟನ್ನು ಒಂದು ಲಕೋಟೆಯಲ್ಲಿ ಹಾಕಿ ಅದನ್ನು ಆರ್ಟಿಕಲ್ 10 ಎಂದು ಗುರುತಿಸಲಾಯಿತು. ನಂತರ ಪೊಲೀಸ ಇನ್ಸಪೆಕ್ಟರವರು ಅವರ ಸಿಬ್ಬಂದಿ ಹೊಸಮನಿಯವರ ಮೂಲಕ ಸೋಡಿಯಂ ಕಾರ್ಬೋನೇಟ ಮತ್ತು ಡಿಸ್ಟಿಲ ವಾಟರ ಮಿಶ್ರಿತ ದ್ರಾವಣವನ್ನು ಒಂದು ಬಟ್ಟಲನಲ್ಲಿ ತಯಾರಿಸಿದರು. ಅದರ ಸ್ಯಾಂಪಲ ತೆಗೆದು ಅದಕ್ಕೆ ಆರ್ಟಿಕಲ್ ನಂ.11 ಎಂದು ನೀಡಲಾಯಿತು. ನಂತರ ಒಂದು ಸ್ವಚ್ಛವಾದ ಹತ್ತಿಯನ್ನು ತೆಗೆದು ಅದರ ಸ್ಯಾಂಪಲ ತೆಗೆದು ಆ ಸ್ಯಾಂಪಲಗೆ

ಆರ್ಟಿಕಲ್ 12 ಎಂದು ನೀಡಲಾಯಿತು. ಉಳಿದ ಹತ್ತಿಯ ತುಂಡಿನಿಂದ 2 ನೇ ಆರೋಪಿಯು ಹಣ ಇಟ್ಟಿದ್ದ ಕರಿ ಬಣ್ಣದ ಬ್ಯಾಗಿನ ಭಾಗವನ್ನು ಒರೆಸಿ ಆ ಹತ್ತಿಯ ತುಂಡನ್ನು ದ್ರಾವಣದಲ್ಲಿ ಅದ್ದಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಎರಡು ಬಾಟಲಗಳಲ್ಲಿ ಸಂಗ್ರಹಿಸಿ ಅವುಗಳಿಗೆ ಆರ್ಟಿಕಲ್ 13, 13 ಎ ಎಂದು ನೀಡಲಾಯಿತು. ಆ ದ್ರಾವಣದಲ್ಲಿ ಅದ್ದಿದ ಹತ್ತಿಯ ತುಂಡನ್ನು ಪ್ಯಾಕ ಮಾಡಿ ಅದನ್ನು ಆರ್ಟಿಕಲ್ 14 ಎಂದು ನೀಡಲಾಯಿತು. ಆರೋಪಿಯು ಆ ಲಂಚದ ಹಣವನ್ನು ಆತನ ಕರಿ ಬಣ್ಣದ ಬ್ಯಾಗಿನ ಒಳಗೆ ಇರುವ ಬಿಳಿ ಹಾಳೆಯ ಮೇಲೆ ಇಟ್ಟಿದ್ದನು. ಪೊಲೀಸ ಇನ್ಸಪೆಕ್ಟರವರು ಆ ರೀತಿ ಹಣ ಇಟ್ಟಿದ್ದ ಹಾಳೆಯ ಭಾಗವನ್ನು ಪೆನ್ನನಿಂದ ಮಾರ್ಕ ಮಾಡಿದರು. ಆ ಹಾಳೆಯ ಮೇಲೆ ಚಂಡಕ ಐ ಕೇರ ಟ್ಯಾಕ್ಸ ಇನ್‌ವಾಯ್ಸು ದಿನಾಂಕ 06.07.2018 ರಂದು ಯೋಗೇಂದ್ರ ಎಂದು ಅದರಲ್ಲಿ ಬರೆದಿತ್ತು. ಆ ಹಾಳೆಯನ್ನು ಒಂದು ಲಕೋಟೆಯಲ್ಲಿ ಹಾಕಿ ಅದನ್ನು ಆರ್ಟಿಕಲ್ 15 ಎಂದು ಗುರುತಿಸಲಾಯಿತು. ಪೊಲೀಸ ಇನ್ಸಪೆಕ್ಟರವರು ಮತ್ತು ಪಂಚರಾದ ನಾವು ಆರೋಪಿ ಹೊಂದಿದ ಆ ಕರಿ ಬ್ಯಾಗನ್ನು ಪರಿಶೀಲನೆ ಮಾಡಿದೇವು. ಆ ಕರಿ ಬಣ್ಣದ ಬ್ಯಾಗಿನ ಮೇಲೆ Player ಎಂದು ಇಂಗ್ಲೀಷ ಅಕ್ಷರದಿಂದ ಬರೆಯಲಾಗಿತ್ತು. 2 ನೇ ಆರೋಪಿಗೆ ಸಂಬಂಧಿಸಿದ SBI ಬ್ಯಾಂಕ ಪಾಸ್ ಪುಸ್ತಕ ಮತ್ತು ಇನ್ನಿತರ ಕಾಗದ ಪತ್ರಗಳು ಆ ಬ್ಯಾಗಿನಲ್ಲಿ ಇದ್ದವು. 2 ನೇ ಆರೋಪಿಗೆ ಆ ಕಾಗದ ಪತ್ರಗಳನ್ನು ಮರಳಿ ನೀಡಲಾಯಿತು. ಆ ಬ್ಯಾಗನ್ನು ಒಂದು ದೊಡ್ಡ ಲಕೋಟೆಯಲ್ಲಿ ಇಟ್ಟು ಪ್ಯಾಕ ಮಾಡಿ ಅದಕ್ಕೆ ಆರ್ಟಿಕಲ್ 16 ಎಂದು ನೀಡಲಾಯಿತು. ಪೊಲೀಸ ಇನ್ಸಪೆಕ್ಟರವರು 2 ನೇ ಆರೋಪಿಯನ್ನು ದಸ್ತಗಿರಿ

ಮಾಡುವುದಾಗಿ ಹೇಳಿ ಮಧ್ಯಾಹ್ನ 03.30 ಗಂಟೆಗೆ ದಸ್ತಗಿರಿ ಮಾಡಿದರು. ಪೊಲೀಸ ಇನ್ಸಪೆಕ್ಟರವರು ಇನ್ನೊಬ್ಬ ಪೊಲೀಸ ಇನ್ಸಪೆಕ್ಟರ ವೈ ಎಸ್ ಧರನಾಯಕ ಮತ್ತು ಪಂಚ ಸಾಕ್ಷಿ 2 ರವರಿಗೆ ಹಾಗೂ ಅವರ ಸಿಬ್ಬಂದಿಯವರಿಗೆ ಡಿಸಿ ಕಚೇರಿಗೆ ಹೋಗಿ 1 ನೇ ಆರೋಪಿಯನ್ನು ಕರೆದುಕೊಂಡು ಬರಲು ತಿಳಿಸಿದರು. ಆಗ 1 ನೇ ಆರೋಪಿಯ ಹೆಸರು ಹಾಗೂ ಮೊಬೈಲ ನಂಬರನ್ನು ಅವರಿಗೆ ನೀಡಿದರು. ಆಗ 3.45 ಗಂಟೆ ಆಗಿತ್ತು. ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿರೆ ಅಲ್ಲಿ ನಡೆದ ಘಟನೆಯ ಬಗ್ಗೆ ವಿವರಿಸುವಂತೆ ಹೇಳಿದರು. ಆಗ ಪಿರ್ಯಾದಿದಾರನು ಅಲ್ಲಿ ನಡೆದ ಎಲ್ಲಾ ಘಟನೆಯನ್ನು ವಿವರಿಸಿ ಹೇಳಿದನು. ಪೊಲೀಸ ಇನ್ಸಪೆಕ್ಟರವರು ಪಂಚನಾದ ನನಗೂ ಅಲ್ಲಿ ನಡೆದ ಘಟನೆ ಬಗ್ಗೆ ಕೇಳಿದರು ಆಗ ನಾನು ಗಲ್ಲೆಯ ಪಕ್ಕದಲ್ಲಿದ್ದ ಟೇಬಲ ಸೋಫಾದ ಮೇಲೆ ಕುಳಿತು ಘಟನೆ ನೋಡಿದ್ದನ್ನು ವಿವರಿಸಿ ಹೇಳಿದನು. ಪೊಲೀಸ ಇನ್ಸಪೆಕ್ಟರವರು ಘಟನೆಯ ಬಗ್ಗೆ ಹೊಟೇಲ ಮ್ಯಾನೇಜರ ರವರಾದ ಚಾಸಾ-2 ತೇಸಜ ರವರಿಗೆ ವಿವರಿಸುವಂತೆ ಕೇಳಿದಾಗ ಅವರು ಸಹ ಅಲ್ಲಿ ನಡೆದ ಘಟನೆಯನ್ನು ವಿವರಿಸಿ ಹೇಳಿದರು. ಪೊಲೀಸ ಇನ್ಸಪೆಕ್ಟರವರು ಪಿರ್ಯಾದಿಯಿಂದ ಸೋನಿ ವಾಯ್ಸ ರೆಕಾರ್ಡರನ್ನು ಪಡೆದು ಅದನ್ನು ಪ್ಲೇ ಮಾಡಿ ಪಂಚರಾದ ನನಗೆ ಕೇಳಿಸಿದರು. ಅದರಲ್ಲಿ ಪಿರ್ಯಾದಿ ಮತ್ತು 2 ನೇ ಆರೋಪಿಯ ನಡುವೆ ನಡೆದ ಸಂಭಾಷಣೆ ರೆಕಾರ್ಡ ಆಗಿತ್ತು. ಆ ಸಂಭಾಷಣೆಯು ಕನ್ನಡ ಮತ್ತು ಹಿಂದಿ ಭಾಷ್ಷೆಯಲ್ಲಿ ಇತ್ತು. ಪೊಲೀಸ ಇನ್ಸಪೆಕ್ಟರವರು ಹಿಂದಿ ಭಾಷ್ಷೆಯನ್ನು ಕನ್ನಡಕ್ಕೆ ಅನುವಾದಿಸಿ ಹೇಳಿದರು. ಸೋನಿ ವಾಯ್ಸ ರೆಕಾರ್ಡರನಲ್ಲಿದ್ದ ಆ ಧ್ವನಿ ಮುದ್ರಣವನ್ನು ಪೊಲೀಸ ಇನ್ಸಪೆಕ್ಟರವರು ಲ್ಯಾಪಟಾಪ ಮೂಲಕ ಎರಡು ಡಿವಿಡಿಗಳಿಗೆ ಕಾಪಿ

ಮಾಡಿ ಅದಕ್ಕೆ ವಿವರವಾದ ಚೀಟಿಯನ್ನು ಅಂಟಿಸಿ ಆರ್ಟಿಕಲ್ 17, 17ಎ ಎಂದು ಗುರುತಿಸಿದರು. ನಂತರ 04.30 ಗಂಟೆಗೆ ಪೊಲೀಸ ಇನ್ಸಪೆಕ್ಟರ ಧರನಾಯಕ ಇವರು ಪಂಚ ಸಾಕ್ಷಿ 2 ಮತ್ತು ಸಿಬ್ಬಂದಿಯೊಂದಿಗೆ 1ನೇ ಆರೋಪಿಯನ್ನು ಕರೆದುಕೊಂಡು ಹೊಟೇಲಗೆ ಬಂದರು. ಆಗ ಪೊಲೀಸ ಇನ್ಸಪೆಕ್ಟರವರು 1ನೇ ಆರೋಪಿಗೆ ಅವರ ಪರಿಚಯ ಮತ್ತು ಪಂಚರಾದ ನನ್ನ ಪರಿಚಯ ಮಾಡಿಕೊಟ್ಟರು. 1ನೇ ಆರೋಪಿಯ ಹೆಸರು ವಿಳಾಸ ಕೇಳಿದಾಗ 1ನೇ ಆರೋಪಿಯು ಆತನ ಹೆಸರು ವಿಳಾಸ ತಿಳಿಸಿದರು. ಆಗ ಪೊಲೀಸ ಇನ್ಸಪೆಕ್ಟರವರು 1ನೇ ಆರೋಪಿ ವಿರುದ್ಧ ಪ್ರಕರಣ ಸಂಖ್ಯೆ 9/2018 ದಾಖಲಾದ ಬಗ್ಗೆ ತಿಳಿಸಿ ಪಿರ್ಯಾದಿದಾರರಿಂದ ಆರೋಪಿಯಾದ ನೀವು ಕಳುಹಿಸಿದ ಆರೋಪಿ ರಾಠೋಡ ಅವರ ಅಂಗಡಿಗೆ ಬಂದು ರೂ.3000/- ಸ್ವೀಕರಿಸಿದಾಗ ಟ್ರ್ಯಾಪ ಮಾಡಿದಾಗಿ ತಿಳಿಸಿದರು.ತನಿಖೆಗೆ ಸಹಕರಿಸುವಂತೆ 1ನೇ ಆರೋಪಿಗೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು 1ನೇ ಆರೋಪಿಗೆ ದಸ್ತಗಿರಿ ಮಾಡುವುದಾಗಿ ತಿಳಿಸಿ ದಸ್ತಗಿರಿ ಮಾಡಿದರು. ಪೊಲೀಸ ಇನ್ಸಪೆಕ್ಟರವರು ಅವರ ಸಿಬ್ಬಂದಿ ಹೊಸಮನಿಯವರಿಗೆ ಟ್ರ್ಯಾಪವಾದ ಸ್ಥಳದ ಕಚ್ಚಾ ನಕಾಶೆ ತಯಾರಿಸಲು ಹೇಳಿದಾಗ ನಾನು ಅವರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದಂತೆ ಹೊಸಮನಿಯವರು ಕಚ್ಚಾ ನಕಾಶೆಯನ್ನು ತಯಾರಿಸಿದರು. ಆ ಕಚ್ಚಾ ನಕಾಶೆಗೆ ಪಂಚರಾದ ನಾವು ಮತ್ತು ಪೊಲೀಸ ಇನ್ಸಪೆಕ್ಟರ ಸಹಿ ಹಾಕಿದೆವು. ಕಚ್ಚಾ ನಕಾಶೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4(ಎ) ನನ್ನ ಸಹಿ. ಅಲ್ಲಿ ಹೊಟೇಲನಲ್ಲಿ ಬಹಳ ಜನ ಸೇರುತ್ತಿರುವುದರಿಂದ ಪೊಲೀಸ ಇನ್ಸಪೆಕ್ಟರವರುಟ್ರ್ಯಾಪ ಪ್ರಕರಣದ ಮುಂದಿನ ಪ್ರಕ್ರಿಯೆ ಮಾಡಲು ಎಲ್ಲರನ್ನು ಆರೋಪಿತರ ಕಚೇರಿಗೆ

ಕರೆದು ತಂದರು. ಆಗ ಸಂಜೆ 05.15 ಗಂಟೆ ಆಗಿತ್ತು. ಅಲ್ಲಿ ಪಂಚನಾಮೆಯ ಪ್ರಕ್ರಿಯೆ ಮುಂದುವರಿಸಲಾಯಿತು. ಪೊಲೀಸ ಇನ್ಸಪೆಕ್ಟರವರು ಆರೋಪಿತರಿಗೆ ಲಂಚದ ಹಣದ ಬಗ್ಗೆ ವಿವರಣೆ ನೀಡಲು ತಿಳಿಸಿದರು. ಆಗ ಆರೋಪಿತರು ಪ್ರತ್ಯೇಕ ಬಿಳಿ ಹಾಳೆಯ ಮೇಲೆ ಅವರೇ ಬರೆದು ವಿವರಣೆ ನೀಡಿದರು. ಪೊಲೀಸ ಇನ್ಸಪೆಕ್ಟರವರು ಆರೋಪಿತರು ಬರೆದುಕೊಟ್ಟ ವಿವರಣೆಯನ್ನು ಪಿರ್ಯಾದಿದಾರರಿಗೆ ಮತ್ತು ಪಂಚರಾದ ನನಗೂ ಓದಿ ತಿಳಿಸಿದರು. ಆಗ ಪಿರ್ಯಾದಿದಾರನು 1 ನೇ ಆರೋಪಿಯು ಆ ರೀತಿ ವಿವರಣೆಯನ್ನು ಸುಳ್ಳು ಬರೆದುಕೊಟ್ಟಿದ್ದಾನೆ ಎಂದರು. 1 ನೇ ಆರೋಪಿಯು ತನ್ನ ಹೊಟೇಲಗೆ ಬಂದು ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಪಿರ್ಯಾದಿದಾರರು ತಿಳಿಸಿದರು. ಈ ಹಿಂದೆ ಫೋನನಲ್ಲಿ ಮಾತನಾಡುವಾಗ 1 ನೇ ಆರೋಪಿಯು ಹಣದ ಬೇಡಿಕೆ ಇಟ್ಟ ಬಗ್ಗೆ ತಿಳಿಸಿದರು. ಪೊಲೀಸ ಇನ್ಸಪೆಕ್ಟರವರು ನನಗೆ ಮತ್ತು ತೇಜಸ ರವರಿಗೆ 1 ನೇ ಆರೋಪಿ ಬರೆದುಕೊಟ್ಟ ವಿವರಣೆ ಬಗ್ಗೆ ಪ್ರತಿಕ್ರಿಯೆ ಕೇಳಿದರು ಆಗ ನಾವು 1 ನೇ ಆರೋಪಿ ಆ ರೀತಿ ಸುಳ್ಳು ಬರೆದುಕೊಟ್ಟಿದ್ದಾರೆಂದು ಹೇಳಿದೆವು. 2 ನೇ ಆರೋಪಿಯು ಹಣವನ್ನು ಪಡೆದುಕೊಂಡ ಬಗ್ಗೆ ನಾವು ನೋಡಿ ಕೇಳಿಸಿಕೊಂಡಿರುತ್ತೇವೆ ಎಂದು ಹೇಳಿದರು. ಆರೋಪಿತರು ಬರೆದುಕೊಟ್ಟ ವಿವರಣೆ ಮೇಲೆ ಪಂಚರಾದ ನಾವು ಸಹಿ ಹಾಕಿದೆವು. ಪೊಲೀಸ ಇನ್ಸಪೆಕ್ಟರವರು ಸಹಿ ಹಾಕಿದರು. 1 ನೇ ಆರೋಪಿಯು ಬರೆದುಕೊಟ್ಟ ವಿವರಣೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. 2 ನೇ ಆರೋಪಿಯು ಬರೆದುಕೊಟ್ಟ ವಿವರಣೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನನ್ನ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ

ಸಹಿಯನ್ನು ನಿಪಿ5(ಎ) , 6(ಎ) ಎಂದು ಗುರುತಿಸಲಾಯಿತು. ಪೊಲೀಸ ಇನ್ಸಪೆಕ್ಟರವರು 1ನೇ ಆರೋಪಿಗೆ ಪಿರ್ಯಾದಿಗೆ ಸಂಬಂಧ ಪಟ್ಟ ದಾಖಲೆಗಳನ್ನು ಮತ್ತು ಕಚೇರಿ ಹಾಜರಿ ಪುಸ್ತಕವನ್ನು ಹಾಜರು ಮಾಡುವಂತೆ ತಿಳಿಸಿದರು. ಆಗ 1ನೇ ಆರೋಪಿಯು ದಾಖಲೆಗಳನ್ನು ಹಾಜರು ಮಾಡಿದನು. 1ನೇ ಆರೋಪಿಯು ದಾಖಲೆಗಳಾದ ನಿರೀಕ್ಷಣಾ ಮೂಲ ಟಿಪ್ಪಣಿ , ಎರಡು ಹಾಜರಿ ಪುಸ್ತಕಗಳನ್ನು ಹಾಜರು ಮಾಡಿದರು. 1ನೇ ಹಾಜರಿ ಪುಸ್ತಕದಲ್ಲಿ 1ನೇ ಆರೋಪಿ ದಿನಾಂಕ 07.07.2018 ರಂದು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಹಿ ಹಾಕಿದ್ದರು. 2ನೇ ಹಾಜರಿ ಪುಸ್ತಕದಲ್ಲಿ 2ನೇ ಆರೋಪಿ ದಿನಾಂಕ 07.07.2018 ರಂದು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಹಿ ಹಾಕಿದ್ದರು. ಆ ದಾಖಲೆಗಳನ್ನು ಪಂಚರಾದ ನಮ್ಮ ಸಮಕ್ಷಮ ಪರಿಶೀಲಿಸಿ ನಮ್ಮ ಸಹಿಗಳನ್ನು ಪಡೆದುಕೊಳ್ಳಲಾಯಿತು. ಆ ನಿರೀಕ್ಷಣಾ ಟಿಪ್ಪಣಿಯನ್ನು ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7(ಎ) ನನ್ನ ಸಹಿ. ಹಾಜರಿ ಪುಸ್ತಕದ ಪ್ರತಿ ದೋಷಾರೋಪಣಾ ಪತ್ರದ ಪುಟ ಸಂಖ್ಯೆ 88 ರಿಂದ 178 ರವರೆಗೆ ಇದ್ದು ಅದನ್ನು ಗುರುತಿಸಿದ್ದೇನೆ. ಅವುಗಳನ್ನು ನಿಪಿ-8 ಎಂದು ಗುರುತಿಸಲಾಯಿತು. ಟ್ರ್ಯಾಪ ಪೂರ್ವದಲ್ಲಿ ಮತ್ತು ಟ್ರ್ಯಾಪ ಕಾಲದಲ್ಲಿ ರೆಕಾರ್ಡ ಮಾಡಿ ಕೊಂಡ ಧ್ವನಿ ಮುದ್ರಣವನ್ನು ಪರೀಕ್ಷೆಗೆ ಕಳುಹಿಸಲೆಂದು ನಮ್ಮ ಸಮಕ್ಷಮ 1ನೇ ಆರೋಪಿಯು ಟ್ರ್ಯಾಪ ಪೂರ್ವದಲ್ಲಿ ಮಾತನಾಡಿದ ಸ್ಕ್ರಿಪ್ಟನ್ನು ತಯಾರಿಸಿ 1ನೇ ಆರೋಪಿಗೆ ಆ ಸ್ಕ್ರಿಪ್ಟನ್ನು 3 ಬಾರಿ ಪ್ರತ್ಯೇಕವಾಗಿ ಓದಿಸಿ ಹಂತ ಹಂತವಾಗಿ ಸೋನಿ ವಾಯ್ಸ ರೆಕಾರ್ಡರನಲ್ಲಿ ಆತನ ಮಾದರಿ ಧ್ವನಿಯನ್ನು ರೆಕಾರ್ಡ ಮಾಡಿಕೊಳ್ಳಲಾಯಿತು. 2ನೇ ಆರೋಪಿಯು ಸಹ ಟ್ರಾಪ

ಪೂರ್ವದಲ್ಲಿ ಮತ್ತು ಟ್ರ್ಯಾಪ ಕಾಲಕ್ಕೆ ಮಾತನಾಡಿದ ಸ್ಕ್ರೀಪ್ಟನ್ನು ತಯಾರಿಸಿ 2 ನೇ ಆರೋಪಿಗೆ ಆ ಸ್ಕ್ರೀಪ್ಟನ್ನು 3 ಬಾರಿ ಪ್ರತ್ಯೇಕವಾಗಿ ಓದಿಸಿ ಹಂತ ಹಂತವಾಗಿ ಸೋನಿ ವಾಯ್ಸು ರೆಕಾರ್ಡರನಲ್ಲಿ ಆತನ ಮಾದರಿ ಧ್ವನಿಯನ್ನು ರೆಕಾರ್ಡ ಮಾಡಿಕೊಳ್ಳಲಾಯಿತು. 1 ನೇ ಆರೋಪಿಯ ಮಾದರಿ ಧ್ವನಿ ರೆಕಾರ್ಡ ಮಾಡಿದ್ದನ್ನು ಲ್ಯಾಪಟಾಪ ಸಹಾಯದಿಂದ 2 ಡಿವಿಡಿಗಳಿಗೆ ಕಾಪಿ ಮಾಡಿ ಆ ಡಿವಿಡಿಗಳಿಗೆ ಆರ್ಟಿಕಲ್ 18, 18 ಎ ಎಂದು ನೀಡಲಾಯಿತು. 2 ನೇ ಆರೋಪಿಯ ಮಾದರಿ ಧ್ವನಿ ರೆಕಾರ್ಡ ಮಾಡಿದ್ದನ್ನು ಲ್ಯಾಪಟಾಪ ಸಹಾಯದಿಂದ 2 ಡಿವಿಡಿಗಳಿಗೆ ಕಾಪಿ ಮಾಡಿ ಆ ಡಿವಿಡಿಗಳಿಗೆ ಆರ್ಟಿಕಲ್ 19, 19 ಎ ಎಂದು ನೀಡಲಾಯಿತು. ಪಿರ್ಯಾದಿ ಮತ್ತು ತೇಜಸ ಇವರ ಮಾದರಿ ಧ್ವನಿಯನ್ನು ಸಹ ಅವರು ಈಗಾಗಲೇ ಮಾತನಾಡಿದ ರೆಕಾರ್ಡ ಇದ್ದ ಸ್ಕ್ರೀಪ್ಟನ್ನು ತಯಾರಿಸಿ ಅವರಿಗೂ ಪ್ರತ್ಯೇಕವಾಗಿ 3 ಬಾರಿ ಓದಿಸಿ ಅವರ ಮಾದರಿ ಧವನಿಯನ್ನು ಸಹ ವಾಯ್ಸು ರೆಕಾರ್ಡರನಲ್ಲಿ ರೆಕಾರ್ಡ ಮಾಡಲಾಯಿತು. ಪಿರ್ಯಾದಿಯ ಆ ಮಾದರಿ ಧ್ವನಿಯನ್ನು ಲ್ಯಾಪಟಾಪ ಸಹಾಯದಿಂದ 2 ಡಿವಿಡಿಗಳಿಗೆ ಕಾಪಿ ಮಾಡಿ ಆ ಡಿವಿಡಿಗಳಿಗೆ ಆರ್ಟಿಕಲ್ 20, 20 ಎ ಎಂದು ನೀಡಲಾಯಿತು. ತೇಜಸ ಈತನ ಮಾದರಿ ಧ್ವನಿಯನ್ನು ಲ್ಯಾಪಟಾಪ ಸಹಾಯದಿಂದ 2 ಡಿವಿಡಿಗಳಿಗೆ ಕಾಪಿ ಮಾಡಿ ಆ ಡಿವಿಡಿಗಳಿಗೆ ಆರ್ಟಿಕಲ್ 21, 21 ಎ ಎಂದು ನೀಡಲಾಯಿತು. ನಂತರ ಪೊಲೀಸ ಇನ್ಸಪೆಕ್ಟರವರು ಆರ್ಟಿಕಲ್ 7 ರಿಂದ 21 ಎ ರವರೆಗಿನ ಆರ್ಟಿಕಲ್‌ನ್ನು ಸೀಲ ಮಾಡಿ S ಎಂಬ ಇಂಗ್ಲಿಷ ಅಕ್ಷರದ ಮೊಹರ ಸೀಲ ಹಾಕಿದರು. ಆ ಆರ್ಟಿಕಲ್‌ಗಳ ವಿವರಗಳನ್ನು ಚೀಟಿಯಲ್ಲಿ ನಮೂದಿಸಿ ಆ ಚೀಟಿಗಳಿಗೆ ಪಂಚರಾದ ನಮ್ಮ ಸಹಿ ಪಡೆದು ಪೊಲೀಸ ಇನ್ಸಪೆಕ್ಟರ ಸಹಿ ಹಾಕಿ ಆ

ಆರ್ಟಿಕಲ್‌ಗಳಿಗೆ ಅಂಟಿಸಲಾಯಿತು.

ಈ ಹಂತದಲ್ಲಿ ಊಟದ ವಿರಾಮವಾಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4 ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**